O.S. ನಂಬರಃ 66/2021

ಪಿ. ಡಬ್ಲ್ಯೂಃ 1

ದಿಃ 20-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ 21 ರಿಂದ 25 ನೇ ಪ್ರತಿವಾದಿಯರ ಪರ ಶ್ರೀ ವಿ.ಎಸ್.ಎನ್ ವಕೀಲರಿಂದಃ

ಕರಿಯಾ ಕುಸ್ಲು ಗೌಡ ನನ್ನ ಅಜ್ಜ. ಮಂಕಾಳಿ ನನ್ನ ಅಜ್ಜಿ. ಕರಿಯಾ ಕುಸ್ಲು ಗೌಡನಿಗೆ 4 ಹೆಣ್ಣುಮಕ್ಕಳು ಹಾಗೂ ಇಬ್ಬರು ಗಂಡು ಮಕ್ಕಳು. ಹೆಣ್ಣು ಮಕ್ಕಳ ಹೆಸರು ದೇವಿ, ರಾಮಿ, ಇಡಿಕಿ, ರೋಹಿನಿ ಇದೆ. ದೇವಿ ಕುಟುಂಬದವರು ಅವರ್ಸಾದಲ್ಲಿ ವಾಸವಿರುತ್ತಾರೆ. ರಾಮಿ ಹಾಗೂ ರೋಹಿನಿ ಹಾರವಾಡದಲ್ಲಿ ವಾಸವಿರುತ್ತಾರೆ. ಇಡಿಕಿ ನನ್ನ ತಾಯಿ ಇದ್ದು, ನಾವೂ ಸಹ ಹಾರವಾಡದಲ್ಲಿ ವಾವಿರುತ್ತೇವೆ. ನನ್ನ ತಾಯಿ ಮತ್ತು ಅವಳ ಸಹೋದರಿಯರು ಮದುವೆಯಾದ ನಂತರ ಅವರವರ ಗಂಡಂದಿರ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. ದಾವೆಯ ಕುರಿತು ಮಾಹಿತಿ ಇದೆ. ದಾವಾ ಆಸ್ತಿ ಕುರಿತು ತಿಳಿದುಕೊಂಡು ದಾವೆ ಸಲ್ಲಿಸಲಾಗಿದೆ. ನಮ್ಮ ತಂದೆಯ ಮನೆಯ ಆಸ್ತಿ ಹಾರವಾಡದಲ್ಲಿದ್ದು, ಸರ್ವೆ ನಂಬಂರ ನೋಡದೇ ಹೇಳಲು ಬರುವುದಿಲ್ಲ. ನನ್ನ ತಂದೆಯ ಆಸ್ತಿ ಬಹಳವಿದೆ ಎಂದರೆ ಅವುಗಳಲ್ಲಿ ಪಾಲು ಸಹ ಬಹಳವಾಗುತ್ತವೆ ಎಂದು ಹೇಳುತ್ತಾರೆ. ನಾನು ವಾಸಿಸುತ್ತಿದ್ದ ಮನೆ ಸರ್ವೆ ನಂ.120/10 ಇದ್ದು, ಅದು 7-ಗುಂಟೆ ಇದೆ. ಸದರಿ ಆಸ್ತಿ ತಂದೆಯಿಂದ ಬಂದಿದೆ.

ಅಂದಾಜು 20 ವರ್ಷಗಳಿಂದ ದಾವಾ ಆಸ್ತಿಗಳ ಕುರಿತು ಮಾಹಿತಿ ಇದ್ದು, ನನ್ನ ತಾಯಿ ಮೃತಪಟ್ಟ ನಂತರ ಆ ಕುರಿತು ತಲೆಕೆಡಿಸಿಕೊಂಡಿಲ್ಲ. ಅಂದಾಜು 15 ವರ್ಷಗಳ ಹಿಂದೆ ನನ್ನ ತಾಯಿ ಮೃತಪಟ್ಟಿದ್ದಾಳೆ. ನನ್ನ ತಾಯಿ ಮೃತಪಟ್ಟ ನಂತರ ವಾರಸಾ ಮುಟೇಶನ್ ಮಾಡಿಸಿಕೊಂಡಿದ್ದೇನೆ. ದಾವಾ ಆಸ್ತಿಗಳು ಕರಿಯಾ ಕುಸ್ಲು

ಗೌಡನು ಖರೀದಿಸಿದ ಆಸ್ತಿಗಳಾಗಿರುತ್ತವೆ ಎಂದು ನನ್ನ ತಾಯಿ ಹೇಳುತ್ತಿದ್ದಳು. ಈ ಕುರಿತು ನಾನು ದಾಖಲೆಗಳನ್ನು ನೋಡಿಲ್ಲ. ಸರ್ವೆ ನಂ.39/3 ರಲ್ಲಿ 3 ಮನೆಗಳಿರುತ್ತವೆ. ಸದರಿ ಮನೆಗಳು ಪ್ರತಿವಾದಿಯ ನಂ.13,24 ಹಾಗೂ ಗಣೇಶನ ಮನೆ ಇದೆ. ಸದರಿ ಮನೆಗಳು ನಾನು ಜನಿಸುವ ಪೂರ್ವದಿಂದಲೂ ಇರುತ್ತವೆ. ಕರಿಯಾ ಕುಸ್ಲು ಗೌಡ ವಾಸಿಸುತ್ತಿದ್ದ ಮನೆಯಲ್ಲಿ 24 ನೇ ಪ್ರತಿವಾದಿ ವಾಸಿಸುತ್ತಿದ್ದಾನೆ.

ಸರ್ವೆ ನಂ. 39/3 ಯಾವ ಮೂಲದಿಂದ ಬಂದಿದೆ ಎಂದು ಮಾಹಿತಿ ಇಲ್ಲ. ಕುಟುಂಬದ ದೇವರ ಕಾರ್ಯವನ್ನು 24 ನೇ ಪ್ರತಿವಾದಿ ಕುಟುಂಬದವರು ಮಾಡಿಕೊಂಡು ಬಂದಿರುತ್ತಾರೆ. ಕರಿಯಾ ಕುಸ್ಲು ಗೌಡನ ಕೊನೆಯ ಮಗ ಲಿಂಗು ಹಾಗೂ ಕೊನೆಯ ಮಗಳು ದೇವಿ. ಕರಿಯಾ ಕುಸ್ಲು ಗೌಡ ಮೃತಪಟ್ಟ ನಂತರ ನನ್ನ ತಾಯಿಗೆ 5-ಗುಂಟೆ ಒಂದು ಕಡೆ 8-ಆಣೆ ಇನ್ನೊಂದು ಕಡೆ ಆಸ್ತಿ ನೀಡಿದ್ದು, ಉಳಿದ ಆಸ್ತಿಯನ್ನು ಅವರು ಏನು ಮಾಡಿಕೊಂಡಿರುತ್ತಾರೆ ನನಗೆ ಮಾಹಿತಿ ಇಲ್ಲ. ನನ್ನ ತಾಯಿಗೆ ನೀಡಿದ ಆಸ್ತಿ ಸರ್ವೆ ನಂ.133/4, 136/ಅ ಎಂದು ಇದೆ. ಸದರಿ ಆಸ್ತಿಗಳು ಕರಿಯಾ ಕುಸ್ಲು ಗೌಡನಿಂದ ಬಂದಿರುತ್ತವೆ. ಸದರಿ ಎರಡೂ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿಲ್ಲ. ಸದರಿ ಆಸ್ತಿಗಳನ್ನು ನನ್ನ ತಾಯಿಗೆ ನೀಡಿರುತ್ತಾರೆ. ಮುಟೇಶನ್ ಆದೇಶದ ಮೇರೆಗೆ ಸದರಿ ಆಸ್ತಿಗಳಿಗೆ ನನ್ನ ಹೆಸರು ಬಂದಿದೆ. 50-60 ವರ್ಷಗಳ ಹಿಂದೆ ನನ್ನ ತಾಯಿಯ ಮದುವೆಯಾಗಿರಬಹುದು ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.